**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು**

ಸಂಖ್ಯೆ: ಎನ್‌ಆರ್‌ಎಸ್(2)/30/21-22 ದಿನಾಂಕ:20-05-2021

## ಸುತ್ತೋಲೆ

**ವಿಷಯ:-** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ತರಬೇತಿ ಹೊಂದಿರುವ **ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ** ಹುದ್ದೆಯಿಂದ ಶುಶ್ರೂಷಾಧಿಕಾರಿ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

**ಉಲ್ಲೇಖ:-** ನಿರ್ದೇಶನಾಲಯದ ಅಂತಿಮ ಜೇಷ್ಠತಾ ಪಟ್ಟಿಯ ಅಧಿಕೃತ ಜ್ಞಾಪನಾ ಪತ್ರ ಸಂ: ಎನ್.ಆರ್.ಎಸ್/229/20-21, ದಿನಾಂಕ: 07.05.2021

* * *

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ತರಬೇತಿ ಹೊಂದಿರುವ **ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ** ಹುದ್ದೆಯಿಂದ ಶುಶ್ರೂಷಾಧಿಕಾರಿ ಹುದ್ದೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಪದೋನ್ನತಿ ನೀಡುವ ಸಲುವಾಗಿ ಉಲ್ಲೇಖದನುಸಾರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರ್ಹ ನೌಕರರುಗಳಿಗೆ Karhfw.Gov.in ರಲ್ಲಿ ಪ್ರಕಟಿಸಿರುವ ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯಂತೆ ಈ ಕೆಳಕಂಡ ಜೇಷ್ಠತಾ ಸಂಖ್ಯೆಯ ನೌಕರರು ಹಾಗೂ ಅಂತಿಮ ಜೇಷ್ಠತೆ ಪಟ್ಟಿಯಲ್ಲಿ ಶುಶ್ರೂಷಕರ ತರಬೇತಿ ಹೊಂದಿರುವ ಕಿರಿಯ ಮಹಿಳ ಆರೋಗ್ಯ ಸಹಾಯಕಿಯರ ಹೆಸರು ಬಿಟ್ಟು ಹೋದಲ್ಲಿ ಅಂತಹ ನೌಕರರು ಸಹ ಕೆಳಕಂಡ ದೃಢೀಕೃತ ದಾಖಲಾತಿಗಳೊಂದಿಗೆ ಕಾರ್ಯ ನಿರ್ವಹಣಾ ವರದಿ ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಬಹುದಾಗಿದೆ.

| | | |
|---|---|---|
| 01 | ಕಲ್ಯಾಣ ಕರ್ನಾಟಕ ಬಾಗದ ನೌಕರರು | ಸಾಮಾನ್ಯ ವರ್ಗ ಜೇಷ್ಠತಾ ಸಂಖ್ಯೆ 01 ರಿಂದ 5 |
| | | ಪರಿಶಿಷ್ಟ ಜಾತಿ ಜೇಷ್ಠತಾ ಸಂಖ್ಯೆ 01 ರಿಂದ 5 |
| | | ಪರಿಶಿಷ್ಟ ಪಂಗಡ ಜೇಷ್ಠತಾ ಸಂಖ್ಯೆ 01 ರಿಂದ 5 |
| 02 | ಕಲ್ಯಾಣ ಕರ್ನಾಟಕ ಬಾಗದ ಹೊರತುಪಡಿಸಿದ ನೌಕರರು | ಸಾಮಾನ್ಯ ವರ್ಗ ಜೇಷ್ಠತಾ ಸಂಖ್ಯೆ 01 ರಿಂದ 35 |
| | | ಪರಿಶಿಷ್ಟ ಜಾತಿ ಜೇಷ್ಠತಾ ಸಂಖ್ಯೆ 01 ರಿಂದ 35 |
| | | ಪರಿಶಿಷ್ಟ ಪಂಗಡ ಜೇಷ್ಠತಾ ಸಂಖ್ಯೆ 01ರಿಂದ 35 |

1. ಕಿರಿಯ ಮಹಿಳ ಆರೋಗ್ಯ ಸಹಾಯಕಿಯರ ಹುದ್ದೆಯಲ್ಲಿ 10 ವರ್ಷ ಸೇವೆ ಪೂರೈಸಿರಬೇಕು
2. ಐದು ವರ್ಷಗಳ ಕಾರ್ಯ ನಿರ್ವಹಣಾ ವರದಿ ನಿಗದಿತ ನಮೂನೆ (4,5,6 ಮತ್ತು 7 ನಿಯಮ) ಎ) ಭಾಗ- I ವೈಯಕ್ತಿಕ ಮಾಹಿತಿ. ಬಿ) ಭಾಗ- II ಸ್ವಯಂ ಮೌಲ್ಯ ಮಾಪನ. ಸಿ)ಭಾಗ- III ವರದಿ. ಡಿ) ಭಾಗ- IV ಪುನರಾವಲೋಕನ. ಇ) ಭಾಗ-V ಅಂಗೀಕಾರ. **ಎಫ್**) ಭಾಗ-VI ಸಂವಹನ. 5 ವರ್ಷದ **ಪ್ರತಿ ವರ್ಷಕ್ಕೆ ಪ್ರತ್ಯೇಕವಾಗಿ** ಸಲ್ಲಿಸುವುದು. **(ಈ ಮಾದರಿಯಲ್ಲಿ ಸಲ್ಲಿಸದ ಕಾರ್ಯ ನಿರ್ವಹಣಾ ವರದಿಗಳನ್ನು** ತಿರಸ್ಕರಿಸಲಾಗುವುದು)
3. ಎಸ್.ಎಸ್.ಎಲ್.ಸಿ. ಅಂಕಪಟ್ಟಿ: ಜನ್ಮ ದಿನಾಂಕದೊಂದಿಗೆ ಕನ್ನಡ ಭಾಷಾ ಪರೀಕ್ಷೆ ಪಾಸು ಮಾಡಿರುವ ಬಗ್ಗೆ ಮತ್ತು ಕನ್ನಡ ವಿನಾಯಿತಿ ಪ್ರಮಾಣ ಪತ್ರ (ನಮೂನೆ-5)
4. ನೇಮಕಾತಿ ಆದೇಶದ ಪ್ರತಿ.
5. ಡಿಪ್ಲೊಮೋ ನರ್ಸಿಂಗ್ (ಜಿ.ಎನ್.ಎಂ) ತರಬೇತಿ ದೃಡೀಕೃತ ಪ್ರಮಾಣ ಪತ್ರ.
6. ನರ್ಸಿಂಗ್ (ಜಿ.ಎನ್.ಎಂ) ಅಂಕ ಪಟ್ಟಿ ದೃಡೀಕೃತ ಪ್ರಮಾಣ ಪತ್ರ.
7. ಕರ್ನಾಟಕ ನರ್ಸಿಂಗ್ ಕೌನ್ಸಿಲ್ ನೋಂದಣಿ ದೃಡೀಕೃತ ಪ್ರಮಾಣ ಪತ್ರ.
8. ನೌಕರರ ಖಾಯಂ ಪೂರ್ವ ಸೇವಾವಧಿ ಘೋಷಣೆ ದೃಡೀಕೃತ ಪತ್ರ.
9. ಪರಿಶಿಷ್ಠ ಜಾತಿ ಪರಿಶಿಷ್ಟ ಪಂಗಡಗಳ ಇತ್ತೀಚಿನ ಪ್ರಮಾಣ ಪತ್ರ ಹಾಗೂ ಈ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿರುವ ನಕಲು ಪ್ರತಿ ಮತ್ತು ಸೇವೆಗೆ ಸೇರುವಾಗ ಯಾವ ಪ್ರವರ್ಗದಡಿ ನೇಮಕಗೊಂಡಿರುತ್ತಾರೆ.

10. ನೌಕರರ ವಿರುದ್ಧ ಇಲಾಖಾ ವಿಚಾರಣೆ: ಕ್ರಿಮಿನಲ್ ಮೊಕದ್ದಮೆ: ನ್ಯಾಯಾಲಯದ ಪ್ರಕರಣಗಳ ಬಗ್ಗೆ
11. ನೌಕರರ ಅಂತಿಮ ಜೇಷ್ಠತಾ ಸಂಖ್ಯೆಯನ್ನು ನಮೂದಿಸುವುದು.
12. ಹೈ–ಕ ಭಾಗದ ನಮೂನೆ ಡಿ ಪ್ರತಿ.
13. ನೌಕರರು ಸೇವೆಗೆ ಸೇರಿದ ದಿನಾಂಕದಿಂದ ಇಲ್ಲಿಯವರೆಗಿನ ಸೇವಾ ವಿವರ ಪೂರ್ಣವಾಗಿ ಒದಗಿಸುವುದು.
14. ಶುಶ್ರೂಷಕರು ಹುದ್ದೆಗಳ ಮಂಜೂರು, ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ಎಲ್ಲಾ ಜಿಲ್ಲಾ / ಸಾರ್ವಜನಿಕ / ತಾಲ್ಲುಕು / ಆಸ್ಪತ್ರೆ, ಸ.ಆ.ಕೇಂದ್ರ, ಪ್ರಾ.ಆ.ಕೇಂದ್ರದಲ್ಲಿ ವಿವರವಾದ ಪಟ್ಟಿಯನ್ನು (31.05.2021 ರವರೆಗಿನ ನಿವೃತ್ತಿ ಹೊಂದುವ ಖಾಲಿ ಹುದ್ದೆಗಳ ವಿವರದೊಂದಿಗೆ) ಮಾಹಿತಿ ಸಲ್ಲಿಸುವುದು.

ಕ್ರ.ಸಂ. 01 ರಿಂದ 14 ರವರೆಗಿನ ಎಲ್ಲಾ ಪ್ರತಿಗಳನ್ನು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು / ಮೇಲಾಧಿಕಾರಿಗಳು / ಸಂಸ್ಥೆಯ ಮುಖ್ಯಸ್ಥರು ಇವರಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು. ದೃಢೀಕರಿಸದ ಪ್ರತಿಗಳನ್ನು ಕಟ್ಟು ನಿಟ್ಟಾಗಿ ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಮಾಹಿತಿ ದಾಖಲೆಗಳನ್ನು ದೃಢೀಕರಿಸಿ ಸಕಾಲದಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ಸಕಾಲದಲ್ಲಿ ಮಾಹಿತಿ ಬಾರದೆ ನೌಕರರು ಪದೋನ್ನತಿ ವಂಚಿತರಾದಲ್ಲಿ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಹಾಗೂ ಕಚೇರಿ ಮುಖ್ಯಸ್ಥರನ್ನೇ ನೇರವಾಗಿ ಜವಾಬ್ದಾರರನ್ನಾಗಿಸಲಾಗುವುದು. ಒಂದು ವೇಳೆ ನೌಕರರು ಪದೋನ್ನತಿ ನಿರಾಕರಿಸಿದ್ದಲ್ಲಿ ಲಿಖಿತ ರೂಪದಲ್ಲಿ ಪಡೆದು ಸೇವಾಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು. ಹಾಗೂ ಸದರಿ ಪತ್ರದ ಪ್ರತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು. ಅಂತಿಮ ಜೇಷ್ಠತಾ ಪಟ್ಟಿಗಳಲ್ಲಿ ನಿವೃತ್ತಿ/ ಪದೋನ್ನತಿ/ ಮರಣ ಹೊಂದಿದ್ದಲ್ಲಿ ಅಂತಹವರ ಮಾಹಿತಿ ನೀಡುವುದು. ಈ ಎಲ್ಲಾ ಮಾಹಿತಿ ಅತಿ ಜರೂರು ಎಂದು ಪರಿಗಣಿಸಿ ಸಂಬಂದಪಟ್ಟ ದಾಖಲೆಗಳೊಂದಿಗೆ ದಿನಾಂಕ: 21/6/ .2021 ರೊಳಗೆ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಗಮನಕ್ಕೆ ತರುವುದೇನೆಂದರೆ, ಅಂತರ್ಜಾಲದಲ್ಲಿ ಪ್ರಕಟಿಸಿರುವ ಜೇಷ್ಠತಾ ಪಟ್ಟಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಿದೆ.
2. ನಿರ್ದೇಶಕರು ಹಾಗೂ ಡೀನ್‌ರವರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ ..................... ..................... ..................... .....................
3. ಆಯುಕ್ತರು, ಬಿಬಿಎಂಪಿ, ಬೆಂಗಳೂರು. ..................... .....................
4. ಆಯುಕ್ತರು, ಮಹಾನಗರ ಪಾಲಿಕೆ ..................... ..................... ..................... .................
5. ಆಯುಕ್ತರು, ನಗರಸಭೆ/ಪುರಸಭೆ..................................... ..................... .....................
6. ಉಪ ಮುಖ್ಯ ವೈದ್ಯಾಧಿಕಾರಿ, ಕೃ.ಭಾ.ಜ.ನಿ.ನಿ. ಆಲಮಟ್ಟಿ/ಯಾದಗಿರಿ.
7. ಅಧೀಕ್ಷಕರು/ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ..........................................
8. ಪ್ರಾಂಶುಪಾಲರು, ಎ.ಎನ್.ಎಂ ತರಬೇತಿಕೇಂದ್ರ, ..........................................
9. ತಾಲ್ಲೂಕು ಆರೋಗ್ಯಾಧಿಕಾರಿಗಳು ..........................................
10. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕ/ಸಮುದಾಯ ಆರೋಗ್ಯ ಕೇಂದ್ರ .......................
11. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
12. ಆದೇಶ ಪ್ರತಿ/ ಕಛೇರಿ ಪ್ರತಿ.